ತೊಂದರೆಗೆ ಈಡಾಗಿರುವ ಬಾಗೂರು – ನವಿಲೆ ಸುರಂಗ ಹೋಗಿರುವ ರೈತರಿಗೆ ಹಣ ಕೊಡುವ ವಿಚಾರದ ಬಗ್ಗೆ

424. ಶ್ರೀ ಡಾ: ಸಂಜಪ್ಪ (ಶ್ರವಣಬೆಳಗೊಳ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೂರು ನವಿಲೆ ಸುರಂಗದಿಂದ, ತೇವಾಂಶ ಪೂರ ಕಡಿಮೆಯಾಗಿ ತೆಂಗಿನ ಮರಗಳು ಒಣಗಿ ಹೋಗಿ 5 ವರ್ಷಗಳಾದರೂ ಬೆಳೆ ನಾಶಕ್ಕೆ ಬೇರೆ ಕಡೆ ಕೊಟ್ಟಿರುವಂತೆ ಪರಿಹಾರ ನೀಡದೇ ಇರಲು ಕಾರಣಗಳೇನು?

ಆ) ಹಾಗಿದ್ದಲ್ಲಿ ಈಗಲಾದರೂ ಆ ಕಡೆ ಗಮನಹರಿಸಿ ನೋಂದ ರೈತರಿಗೆ ನಷ್ಟವಾದ ಬೆಳೆಗೆ ಪರಿಹಾರ ನೀಡಲು ಕೂಡಲೇ ಸರ್ಕಾರದವರು ಕ್ರಮಕೈಗೊಳ್ಳುವರೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):–

ಅ) ಬಾಗೂರು–ನವಿಲೆ ಸುರಂಗದಿಂದ ತೇವಾಂಶ ಪೂರ ಕಡಿಮೆಯಾಗಿ ತೆಂಗಿನ ಮರಗಳು ಒಣಗಿ ಹೋಗಿರುವ ವಿಷಯದಲ್ಲಿ ಮಾಹಿತಿ ಸರ್ಕಾರದಲ್ಲಿಲ್ಲ. ಬೆಳೆನಾಶಕ್ಕೆ ಇಲಾಖೆಯಿಂದ ಯಾವ ಪರಿಹಾರವೂ ನೀಡಿರುವುದಿಲ್ಲ.

ಆ) ಪರಿಸರ ತಜ್ಞರಿಂದ ಸಮೀಕ್ಷೆಯನ್ನು ನಡೆಸಬೇಕೆಂಬ ಪ್ರಸ್ತಾವ ಪರಿಶೀಲಿಸಿ ಅವರ ವರದಿಯ ಮೇಲೆ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ.

ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಿಸಿರುವ ಮನೆಗಳು ಖಾಲಿಯಿರುವ ಬಗ್ಗೆ

106. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯು ಇಲ್ಲಿಯವರೆವಿಗೆ ಕಟ್ಟಿರುವ ಮತ್ತು ಹಂಚಿಕೆ ಮಾಡಿರುವ ಮನೆಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಇನ್ನೂ ಸುಮಾರು ಮನೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಾರಣವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):–

ಅ) ಕರ್ನಾಟಕ ಗೃಹ ಮಂಡಳಿಯು 1965ರಲ್ಲಿ ಸ್ಥಾಪನೆಯಾದಂದಿನಿಂದ ಮಾರ್ಚ್ 1990ರ ಅಂತ್ಯದವರೆಗೆ 83,487 ಮನೆಗಳನ್ನು ನಿರ್ಮಿಸಿ 80, 840 ಮನೆಗಳನ್ನು ಹಂಚಿಕೆ ಮಾಡಿದೆ. ಒಟ್ಟು 2647 ಮನೆಗಳು ಖಾಲಿ ಉಳಿದಿವೆ. (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಲಾಗಿದೆ)

ಆ) ಬಂದಿದೆ.

ಇ) ಕೆಲವು ಕಡೆ ಬೇಡಿಕೆಯು ಇಲ್ಲದಿರುವುದರಿಂದ ಖಾಲಿ ಇರುತ್ತದೆ.

ಅ) ನಿರ್ಮಾಣ ವೆಚ್ಚ ಹೆಚ್ಚಿರುವುದರಿಂದ

ಇ) ಮುಂಗಡ ಠೇವಣಿ ಹೆಚ್ಚಾಗಿರುವುದರಿಂದ

ಈ) ಕೀಳು ದರ್ಜೆಯ ಗುಣಮಟ್ಟದ ಮನೆಗಳು

ಮಂಡಳಿ ಪ್ರಾರಂಭವಾದಂದಿನಿರಿದ ಇದುವರೆಗೆ ಕಟ್ಟುರುವ ಮನೆಗಳ ಜಿಲ್ಲಾವಾರು ವರದಿ – 31–3–90ಕ್ಕೆ ಅಂತ್ಯಗೊಂಡಂತೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ್ರಾರಂಭದಿಂದ ಇದುವರೆಗೂ 31–3–90 ರವರೆಗೆ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ	ಹಂಚಿಕೆ ಮಾಡಿರುವ ಮನೆಗಳು
1.	ಬೆಂಗಳೂರು ಪಟ್ಟಣ	15364	15244
2.	ಬೆಂಗಳೂರು (ಗ್ರಾಮಾಂತರ)	313	313
3.	ತುಮಕೂರು	1575	1535
4.	ಕೋಲಾರ	1201	1165
5.	ಮೈಸೂರು	10661	10207
6.	ಮಂಡ್ಯ	2283	2283
7.	ಹಾಸನ	2458	2080
8.	ಚಿಕ್ಕಮಗಳೂರು	1413	1356
9.	ಶಿವಮೊಗ್ಗ	2324	2242
10.	ಚಿತ್ರದುರ್ಗ	1884	1833
11.	ಬಳ್ಳಾರಿ	3190	2819
12.	ಧಾರವಾಡ	4678	4678
13.	ಬೆಳಗಾಂ	2328	2299
14.	ಬಿಜಾಪುರ	2250	2174
15.	ಉತ್ತರ ಕನ್ನಡ	2938	2936
16.	ದಕ್ಷಿಣ ಕನ್ನಡ	1967	1761
17.	ಕೊಡಗು	479	218
18.	ಗುಲ್ಬರ್ಗಾ	5554	5200
19.	ಬೀದರ್	916	916
20.	ರಾಯಚೂರು	1615	1485
21.	ನಗದು ಸಾಲ ಮತ್ತು ಇತರೆ	18096	18096
	ಒಟ್ಟು	**83487**	**80840**

ಶ್ರವಣಬೆಳಗೊಳ ಕ್ಷೇತ್ರದಲ್ಲಿ ಭಾರತ–ಬಂದ್ ದಿನ ನಡೆದ ಗಲಭೆ ಬಗ್ಗೆ

425. ಡಾ: ನಂಜಪ್ಪ (ಶ್ರವಣಬೆಳಗೊಳ):– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರವಣಬೆಳಗೊಳ ಕ್ಷೇತ್ರದಲ್ಲಿ ಭಾರತ್–ಬಂದ್‌ನಂದು ಅನೇಕ ಮುಗ್ಧ ಸಾಮಾನ್ಯ ಜನರ ಆಸ್ತಿಪಾಸ್ತಿಗಳ ಲೂಟಿ, ಬೆಂಕಿಯಿಂದ ಭಸ್ಮವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣರಾದವರ ವಿರುದ್ಧ ಸರಕಾರದವರು ತೆಗೆದುಕೊಂಡಿರುವ ಕ್ರಮವೇನು ಮತ್ತು ಅವರನ್ನು ಪತ್ತೆಹಚ್ಚಲಾಗಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):–

ಅ) ಹೌದು

ಆ) ಸದರಿ ಗಲಭೆಗೆ 136 ಜನ ಕಾರಣವೆಂದು ಗುರ್ತಿಸಿದ ನಂತರ ಬಂಧಿಸಿ, ಕಾನೂನಿನ್ವಯ ಕ್ರಮ ಕೈಗೊಳ್ಳಲಾಗಿದೆ.